# ಮೂಗಿರೋದೇ ತೂರಿಸೋಕೆ!



■ ಕೆ.ಪಿ. ಸತ್ಯನಾರಾಯಣ

ಕಲೆ: ಸಂತೋಷ್ ಸಸಿಹಿತ್ಲು

'ಮೂಗಿರೋದೇ ಕಂಡ ಕಂಡಲ್ಲಿ ತೂರಿಸೋಕೆ' ಎನ್ನುವುದು ಸಮಾಜದಲ್ಲಿರುವ ಕೆಲವರ ಬಲವಾದ ನಂಬಿಕೆ. ಹಲವರ ಅಂದರೂ ತಪ್ಪಾಗಲಾರದೇನೋ! ಅವರ ಹುಟ್ಟುಗುಣ ಅದು. 'ಹುಟ್ಟುಗುಣ ಸುಟ್ಟರೂ ಹೋಗಲ್ಲ' ಎನ್ನುವ ಮಾತಿನಂತೆ, ಮೂಗು ತೂರಿಸುವುದು ತಪ್ಪು ಎಂಬುದು ಗೊತ್ತಾದ ಮೇಲೂ ಅಭ್ಯಾಸಬಲದಿಂದ ಮಾಡುತ್ತಲೇ ಇರುತ್ತಾರೆ. ಅವರಿವರ ಚಲನವಲನಗಳ ಮೇಲೆ ಕಣ್ಣಿಟ್ಟು ಕಾಯುತ್ತಿರುವ ಈ ಮಂದಿ, ಮೂಗು ತೂರಿಸುವುದರ ಮಧ್ಯೆ ಬಿಡುವು ಮಾಡಿಕೊಂಡು, ತಮ್ಮ ಕೆಲಸ ಕಾರ್ಯಗಳನ್ನು ಯಾವಾಗ ಮಾಡಿಕೊಳ್ಳುತ್ತಾರೋ ದೇವರೇ ಬಲ್ಲ!

ಮೂಗು ತೂರಿಸುವುದು ಎನ್ನುವುದಕ್ಕೆ ಇಂಗ್ಲಿಷಿನಲ್ಲಿ 'ಪೋಕಿಂಗ್ ನೋಸ್' ಎಂದು ಕರೆಯುತ್ತಾರೆ. ತಲೆ ಹಾಕುವುದು, ಮಧ್ಯ ಪ್ರವೇಶ ಮಾಡುವುದು, ಹಸ್ತಕ್ಷೇಪ ಮಾಡುವುದು, ಪಂಚಾಯತಿಗೆ ತೊಡಗುವುದು, ಅಧಿಕ ಪ್ರಸಂಗತನ ಇತ್ಯಾದಿ ಅನೇಕ ಸಮಾನಾರ್ಥಕ ಪದಗುಚ್ಛಗಳಿವೆ. ಯಾವುದೇ ಪದ ಬಳಸಿದರೂ ಅರ್ಥ ಅದೇನೆ! ಈ ರೀತಿ ಮಧ್ಯ ಪ್ರವೇಶಿಸುವ ಅಭ್ಯಾಸ ಇಂಗ್ಲಿಷಿನವರಿಗಿಂತ ನಮ್ಮಲ್ಲೇ ಹೆಚ್ಚು ಎನ್ನುವುದು ನಮ್ಮ ಒಬ್ಬರು ಹಾಸ್ಯ ಸಾಯಿತಿಗಳ ಅಂಬೋಣ. ಅವರು ಆಗಾಗ್ಗೆ ಪರದೇಶಿಗಳಾಗುತ್ತಿರುವುದರಿಂದ ಅವರ ಮಾತನ್ನು ನಂಬಬಹುದು.

ದಿನಪತ್ರಿಕೆಗಳ ಸುದ್ದಿಯ ತುಣುಕುಗಳನ್ನು ಗಮನಿಸುತ್ತಿದ್ದರೆ ಮೂಗು ತೂರಿಸುವುದರ ಕುರಿತ ವರದಿ ದಿನಪತ್ರಿಕೆಗಳಲ್ಲಿ ನಿತ್ಯ ಒಂದೆರಡು ಬಾರಿಯಾದರೂ ಪ್ರಕಟವಾಗಿರುತ್ತದೆ. ಒಬ್ಬರಲ್ಲ ಒಬ್ಬ ಪ್ರಮುಖ ವ್ಯಕ್ತಿ, ಹೀಗಾದರೂ ಜನರ ಗಮನದಲ್ಲಿ ಇರೋಣ ಎಂದು, ತಮಗೆ ಸಂಬಂಧವಿಲ್ಲದ ವಿಷಯದಲ್ಲಿ ಮೂಗು ತೂರಿಸುತ್ತಲೇ ಇರುತ್ತಾರೆ.

* ನಮ್ಮ ಜನಾಂಗದ ಶ್ರೀ... ಅವರು ಮಂತ್ರಿಯಾಗಿ ಅವಧಿ ಪೂರ್ಣಗೊಳಿಸಲೇಬೇಕು, ಬೇರೆಯವರು ಅನಗತ್ಯವಾಗಿ ಮೂಗು ತೂರಿಸುವುದು ಸರಿಯಲ್ಲ ಎಂದು ಸ್ವಾಮೀಜಿ ಆಗ್ರಹಪೂರ್ವಕವಾಗಿ ಹೇಳಿದರು' ತಮಾಷೆ ಎಂದರೆ ಆ ಸ್ವಾಮೀಜಿ, ಸ್ವಜಾತಿ ಪ್ರೇಮದಿಂದ, ಒಂದು ಪಕ್ಷದ ಮತ್ತು ಸರ್ಕಾರದ ನಿರ್ಧಾರಗಳ ವಿಷಯದಲ್ಲಿ ಸ್ವತಃ ಮೂಗು ತೂರಿಸುತ್ತಿದ್ದಾರೆ!

* ಖಲಿಸ್ತಾನಿ ಭಯೋತ್ಪಾದಕ ಗುರ್ಪತ್ವಂತ್ ಸಿಂಗ್ ಪನ್ನುನ್ ಹತ್ಯೆಯ ಸಂಚು ವಿಫಲವಾದ ಪ್ರಕರಣದ ತನಿಖೆಯ ಕುರಿತು 'ಭಾರತ ಯಾವುದೇ ಸಮಸ್ಯೆಗಳನ್ನು ನಿಭಾಯಿಸಲು ಸಮರ್ಥವಾಗಿದೆ. ನಮ್ಮ ದೇಶದ ಆಂತರಿಕ ವಿಚಾರಗಳಲ್ಲಿ ನೆರೆಯ ದೇಶದವರು ಮೂಗು ತೂರಿಸುವುದನ್ನು ಸಹಿಸಲು ಸಾಧ್ಯವಿಲ್ಲ' ಎನ್ನುವ ಮೂಲಕ ವಿದೇಶಾಂಗ ಸಚಿವಾಲಯ ಚೀನಾಗೆ ತಿರುಗೇಟು ನೀಡಿದೆ.

* ಶಾಸಕರು ನಗರಸಭೆಯ ಕಾರ್ಯಗಳಲ್ಲಿ ಮೂಗು ತೂರಿಸುವುದು ಬಿಟ್ಟು ತಮ್ಮ ಕ್ಷೇತ್ರದ ಅಭಿವೃದ್ಧಿಯತ್ತ ಗಮನಹರಿಸಬೇಕು ಎಂದು... ವೇದಿಕೆ ಅಧ್ಯಕ್ಷರು ಹೇಳಿದರು.'

'ಶ್ರೀಯುತರು ಇನ್ನೊಂದು ಪಕ್ಷದ ವ್ಯವಹಾರದಲ್ಲಿ ಕೈ ಹಾಕಬಾರದು. ಯಾರನ್ನು ಸಚಿವರನ್ನಾಗಿ ಮಾಡಬೇಕು, ಯಾರನ್ನು ಬಿಡಬೇಕು ಎನ್ನುವುದು ಆಯಾ ಪಕ್ಷಕ್ಕೆ ಬಿಟ್ಟಿದ್ದು. ಇನ್ನೊಂದು ಪಕ್ಷದ ವ್ಯವಹಾರದಲ್ಲಿ ಮೂಗು ತೂರಿಸುವುದು ಎಷ್ಟು ಸರಿ? ಅವರ ಪಕ್ಷದ ವ್ಯವಹಾರದಲ್ಲಿ ನಾವು ಮೂಗು ತೂರಿಸಿದರೆ ಸುಮ್ಮನೆ ಇರುತ್ತಾರಾ?' ಎಂದು ಸಚಿವರೊಬ್ಬರು ಹೇಳಿಕೆ ನೀಡಿದ್ದಾರೆ.

ಹೀಗೆ ಹುಡುಕುತ್ತಾ ಹೋದರೆ ಮೂಗು ತೂರಿಸುವ ಸುದ್ದಿಯಿಲ್ಲದ ದಿನವೇ ಇಲ್ಲ ಎನ್ನುವುದು ತಿಳಿದುಬರುತ್ತದೆ. ಅಂದ ಹಾಗೆ